**Right of Women to Menstrual Leave and free access to Menstrual Health Bill** 2018 ಮಸೂದೆಯನ್ನು ಮಂಡಿಸಲಾಯಿತು. ಇದೀಗ ಕರ್ನಾಟಕದ 'ಕಾರ್ಮಿಕ ಸಚಿವಾಲಯ' ವರ್ಷಕ್ಕೆ ಆರು ದಿನಗಳ ವೇತನ ಸಹಿತ ರಜೆಯನ್ನು ಸರ್ಕಾರಿ ಮತ್ತು ಖಾಸಗಿ ಉದ್ಯೋಗಿಗಳಿಗೆ ನೀಡಲು ಅಂತಿಮ ಹಂತದ ಚರ್ಚೆ ನಡೆಸುತ್ತಿದೆ. ಇದು ಊರ್ಜಿತವಾದರೆ 'ಮುಟ್ಟಿನ ರಜೆ'ಯನ್ನು ನೀಡುವ ರಾಜ್ಯಗಳಲ್ಲಿ ಕರ್ನಾಟಕ ಭಾರತದ ನಾಲ್ಕನೇ ರಾಜ್ಯವಾಗುತ್ತದೆ.

## ಖಾಸಗಿ ಉದ್ಯಮಗಳ ಭಿನ್ನ ಹಾದಿ

ಹಲವು ಖಾಸಗಿ ಕಂಪನಿಗಳು ತಮ್ಮ ಉದ್ಯೋಗಿಗಳ ನಡುವೆ ಸಮಾನತೆಯನ್ನು ಕಾಪಾಡಲು ಮತ್ತು ಮುಟ್ಟಿನ ಬಗೆಗಿನ ಭಯ ಮತ್ತು ಮುಜುಗರಗಳನ್ನು ಕಡಿಮೆ ಮಾಡಲು ತಮ್ಮದೇ ನಿಯಮಗಳನ್ನು ಪಾಲಿಸುತ್ತಿವೆ.

'ನೈಕ್' ಕಂಪನಿ ತಾನು ಕಾರ್ಯ ನಿರ್ವಹಿಸುವ ದೇಶಗಳ ಕಾರ್ಮಿಕರ ಕಾನೂನುಗಳನ್ನು ಪಾಲಿಸುತ್ತಿದೆ. ಭಾರತದಲ್ಲಿ ಮುಂಬೈ ನಗರದ 'ಗೊಝೂಪ್ ಅಂಡ್ ಕಲ್ಚರ್ ಮಷೀನ್' 2017ರಲ್ಲಿ ತನ್ನ ಕೆಲಸಗಾರರಿಗೆ ಮುಟ್ಟಿನ ಮೊದಲ ದಿನದ ರಜಾ ಮಂಜೂರು ಮಾಡಿದ ಮೊದಲ ಖಾಸಗಿ ಉದ್ಯಮ ಎನ್ನಿಸಿಕೊಂಡಿತು. ಝೊಮಾಟೊ, ಬೈಜೂಸ್ ಮತ್ತು ಸ್ವಿಗ್ಗಿಗಳು ವರ್ಷಕ್ಕೆ ಹತ್ತು ಮುಟ್ಟಿನ ರಜೆಗಳನ್ನು ನೀಡುವ ಸಂಸ್ಥೆಗಳಾಗಿವೆ. ಇದರ ಜೊತೆಯಲ್ಲಿಯೇ, ಲಿಂಗ ಬದಲಾವಣೆಯ ಮೂಲಕ ಗುರುತಿಸಿಕೊಳ್ಳುವ ಜನರಿಗೂ ಈ ರಜೆಯನ್ನು ವಿಸ್ತರಿಸಿವೆ. ಖಾಸಗಿ ಸಂಸ್ಥೆಗಳಾದ **FlyMyBiz, Gencosys, Kaithn** ಗಳವರು ವಾರ್ಷಿಕ 10 ದಿನಗಳ ಮುಟ್ಟಿನ ರಜೆ ನೀಡುತ್ತಿವೆ.

## ಭಾರತದ ಕಟುವಾಸ್ತವಗಳು

ಯಾವುದೇ ಕಾನೂನು ಜಾರಿಯಾಗುವುದಕ್ಕೂ ಅದನ್ನು ಸಮಾಜದಲ್ಲಿ ನಿರ್ಭಿಡೆಯಾಗಿ ಬಳಸುವುದಕ್ಕೂ ವ್ಯತ್ಯಾಸ ಇರುತ್ತದೆ. ಮುಟ್ಟಿನ ದಿನಗಳ ನೋವಿನ ಬಗ್ಗೆ ಮಾತಾಡಿದರೆ ಕೆಲಸ ಕಳೆದುಕೊಳ್ಳುವ ಅಥವಾ ಕೆಲಸವೇ ಸಿಗುವುದಿಲ್ಲ ಎನ್ನುವ ಭಯದ ಕಾರಣ ಹೆಂಗಸರು ಅವುಡು ಕಚ್ಚಿ, ಹಲವು ಬಗೆಯ ಮಾತ್ರೆಗಳ ಮೊರೆ ಹೋಗುತ್ತ ಕೆಲಸ ಮಾಡುತ್ತಾರೆ. ತಮಗಿರುವ ಮುಟ್ಟಿನ ತೊಂದರೆಗಳನ್ನು ಗೌಪ್ಯವಾಗಿಟ್ಟು ಹೆಣಗುತ್ತಾರೆ.

ಆರ್ಥಿಕ ಮತ್ತು ಸಾಮಾಜಿಕ ವಲಯಗಳಲ್ಲಿ ತೀವ್ರ ವ್ಯತ್ಯಾಸವಿರುವ ಭಾರತದಂತಹ ದೇಶಗಳಲ್ಲಿ ಹೊಟ್ಟೆಪಾಡಿಗಾಗಿ, ಸಂಸಾರಕ್ಕಾಗಿ ಮಹಿಳೆಯರು ಕೆಲವೊಮ್ಮೆ ತೆಗೆದುಕೊಳ್ಳುವ, ತೆಗೆದುಕೊಂಡಿರುವ ನಿರ್ಧಾರಗಳನ್ನು ಕೇಳಿದಾಗ ಮುಟ್ಟಿನ ಸಮಸ್ಯೆ ಬಡತನದಲ್ಲಿ, ದಾರಿದ್ರ್ಯದ ರೇಖೆಯ ಕೆಳಗಿರುವವರಲ್ಲಿ ಅತ್ಯಂತ ದಾರುಣ ರೂಪ ಪಡೆದಿರುವುದನ್ನು ನೋಡುತ್ತೇವೆ.

ಭಾರತದಲ್ಲಿ 35.5 ಕೋಟಿ ಮಹಿಳೆಯರು ಋತುಸ್ರಾವದ ವಯೋಮಾನದವರಾಗಿದ್ದಾರೆ. ಅವರಲ್ಲಿ ಶೇ. 75 ಮಹಿಳೆಯರು ಇಂದಿಗೂ ಹಳೆಯ ಮೆತ್ತಗಿನ ಸೀರೆ, ಹರಿದ ಬಟ್ಟೆಗಳನ್ನು ಉಪಯೋಗಿಸುತ್ತಿದ್ದಾರೆ. ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಕಬ್ಬಿನ ಉದ್ಯಮಿಗಳು ಹಿಂದೊಮ್ಮೆ ಋತುಸ್ರಾವದ ವಯಸ್ಸಿನ ಯಾವ ಮಹಿಳೆಯರನ್ನೂ ಕೆಲಸಕ್ಕೆ ತೆಗೆದುಕೊಳ್ಳದ ಕಾರಣ, ಸುಮಾರು ಹತ್ತು ಸಾವಿರ ಮಹಿಳೆಯರು ತಮ್ಮ ಗರ್ಭಕೋಶಗಳನ್ನೇ ತೆಗೆಸಿಕೊಂಡ ಉದಾಹರಣೆಗಳಿವೆ. ಅದಕ್ಕಾಗಿ ಕಳ್ಳದಂಧೆಯ ವೈದ್ಯರ ಮೊರೆಹೋಗಿದ್ದರು. ಗರ್ಭಕೋಶ ತೆಗೆಸಿಕೊಂಡಿದ್ದನ್ನು ಧಣಿಗಳಿಗೆ ಒಳಗೊಳಗೆ ಖಾತ್ರಿಮಾಡಿ ಕೆಲಸ ಪಡೆಯಬೇಕಾದಂತಹ ತೀವ್ರ ಸಂಕಷ್ಟವನ್ನು ಅನುಭವಿಸಿದ್ದರು. ಇಂದಿಗೂ ಈ ಹೆಂಗಸರು ತೀವ್ರವಾದ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಈ ಘಟನೆ ಮಾನವ ಹಕ್ಕುಗಳ ಉಲ್ಲಂಘನೆಯೇ ಸರಿ. ಇಂಥ ಪ್ರಕರಣಗಳು, ತೀವ್ರ ಬಡತನ ಮತ್ತು ಹೊಟ್ಟೆಪಾಡಿಗಾಗಿ ಅತ್ಯಂತ ನೈಸರ್ಗಿಕ ಕ್ರಿಯೆಯನ್ನು ಸ್ಥಗಿತಗೊಳಿಸಿಕೊಳ್ಳಲು ತಮ್ಮ ಶರೀರದ ಅಂಗವೊಂದನ್ನು ಬಡ ಹೆಂಗಸರು ತ್ಯಜಿಸಬೇಕಾದ ಹಿಂದಿರುವ ಒತ್ತಡವನ್ನು ತೆರೆದಿಡುತ್ತದೆ. ಕೆಳವರ್ಗದ ವಲಯಗಳಲ್ಲಿ ಸಮಾಜ ಋತುಸ್ರಾವವನ್ನು ನೋಡುವ ಮತ್ತು ಆ ಕಾರಣ ಹೆಂಗಸರಿಗೆ ಕೆಲಸವನ್ನು ನೀಡದ ತೀವ್ರ ತಾರತಮ್ಯವನ್ನು ವೇದ್ಯಗೊಳಿಸುತ್ತದೆ.

ಬಡವರಲ್ಲಿ, ಹಿಂದುಳಿದ ಪ್ರದೇಶಗಳಲ್ಲಿ, ಅಂಧ ನಂಬಿಕೆಗಳಿರುವ ಸಮುದಾಯಗಳಲ್ಲಿ ಮಹಿಳೆಯರನ್ನು ವಿಚಿತ್ರ ದೃಷ್ಟಿಯಿಂದ ನೋಡಲಾಗುತ್ತದೆ. ಸಾಮಾನ್ಯ ದಿನಗಳಲ್ಲಿ ಅವರಿಗೆ ದೊರೆಯುವ ಆರೈಕೆಯೂ ಮುಟ್ಟಿನ ದಿನಗಳಲ್ಲಿ ಇಲ್ಲವಾಗುತ್ತದೆ. ಅದೆಷ್ಟೋ ಗಂಡಂದಿರು ಅವರ ಹೆಂಡತಿಯರನ್ನು 'ಮತ್ತೆ ಶುರುವಾಯ್ತು' ಎಂದು ಹಳಿಯುವ ಮೂಲಕ, ಅದಾಗಲೇ ಜರ್ಝರಿತಗೊಂಡ ಮಹಿಳೆಯರನ್ನು ಮತ್ತಷ್ಟು ಮಾನಸಿಕವಾಗಿ ಇರಿದು ತಿರಸ್ಕರಿಸುತ್ತಾರೆ. ಉದ್ಯೋಗ, ಆಟೋಟ, ಸಾಂಸ್ಕೃತಿಕ ವಲಯಗಳಲ್ಲಿ ಒದಗಿ ಬರುವ ಹಲವಾರು ಉತ್ತಮ ಅವಕಾಶಗಳಿಂದ ಮಹಿಳೆಯರು ವಂಚಿತರಾಗುತ್ತಾರೆ. ಈ ಎಲ್ಲ ಕಾರಣಗಳಿಂದ 'ಮುಟ್ಟಿಸಿಕೊಳ್ಳಬಾರದ' ಆ ದಿನಗಳ ಬಗ್ಗೆ ಮಾತನಾಡುವುದನ್ನೇ ಮಹಿಳೆಯರು ಮೊಟಕುಗೊಳಿಸಿದ್ದಾರೆ. ಅದೊಂದು 'ನಿಷೇಧಿತ' ವಿಷಯವಾಗಿರುವ ಕಾರಣ ಈ ದಿನಗಳಲ್ಲಿ ತೀವ್ರ ನೋವು ಮತ್ತು ತಳಮಳಗಳನ್ನು ಎದುರಿಸುವ ಮಹಿಳೆಯರ ಮೂಕವೇದನೆ ಯಾರ ಕಿವಿಯನ್ನೂ ಮುಟ್ಟುವುದಿಲ್ಲ.

## ಮುಟ್ಟಿನ ರಜಾ ದುರುಪಯೋಗಗೊಳ್ಳಬಹುದೇ?

2023ರಲ್ಲಿ ಸ್ಪೇನ್ ದೇಶ, ಇಡೀ ಯೂರೋಪಿನಲ್ಲೇ ಮುಟ್ಟಿನ ರಜೆಯನ್ನು ಮಹಿಳೆಯರಿಗೆ ನೀಡಿದ ಮೊಟ್ಟಮೊದಲ ಯುರೋಪಿಯನ್ ದೇಶ ಎಂದು ಹೆಸರುವಾಸಿಯಾಯಿತು. 'ಇದೊಂದು ಚಾರಿತ್ರಿಕ ಗೆಲುವು' ಎಂದು ಮಹಿಳೆಯರು ಹರ್ಷಿಸಿದರು. 'ಇನ್ನು ಮುಂದೆ ಮಹಿಳೆಯರು ಮುಟ್ಟನ್ನು ಮುಂದಕ್ಕೆ ಹಾಕುವ ಮಾತ್ರೆ ನುಂಗಿ ಅಥವಾ ನೋವನ್ನು ನುಂಗಿಕೊಂಡು ಏನೂ ಆಗಿಲ್ಲವೆಂಬಂತೆ ನಟಿಸುತ್ತ ಕೆಲಸ ಮಾಡಬೇಕಿಲ್ಲ. ಶತಮಾನಗಳ ತಾರತಮ್ಯಕ್ಕೆ ಇಂದು ತೆರೆ ಬಿದ್ದಿದೆ' ಎಂದು ಅಲ್ಲಿನ ಸರ್ಕಾರ ಹೇಳಿತು. ಹೀಗಿದ್ದೂ ಈ ವರ್ಷ ಅಲ್ಲಿನ 'ಮಿನಿಸ್ಟ್ರಿ ಆಫ್ ಇನ್‌ಕ್ಲೂಷನ್, ಸೋಷಿಯಲ್ ಸೆಕ್ಯೂರಿಟಿ ಅಂಡ್ ಮೈಗ್ರೇಷನ್' ಬಿಡುಗಡೆ ಮಾಡಿರುವ ಪಟ್ಟಿಯ ಪ್ರಕಾರ, ಕಳೆದ 11 ತಿಂಗಳಲ್ಲಿ ಕೇವಲ 1559 ಬಾರಿ ಮಾತ್ರ ಈ ರಜೆಯ ಬಳಕೆಯಾಗಿದೆ. ಸರಾಸರಿ 3 ದಿನಗಳನ್ನು ಮಾತ್ರ ಮಹಿಳೆಯರು ಬಳಸಿಕೊಂಡಿದ್ದಾರೆ. ದಿನವೊಂದಕ್ಕೆ

